ದಿನಾಂಕ 05-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಫ್.ಬಿ.ಎಂ ವಕೀಲರಿಂದಃ</u>**

1 ರಿಂದ 4 ನೇ ಪ್ರತಿವಾದಿಗಳು ವಿದ್ಯಾಭ್ಯಾಸ ಮಾಡಿರುವುದಿಲ್ಲ. ದಿಃ 15-03-1964 ರಂದು 1 ನೇ ಪ್ರತಿವಾದಿ ಜನಿಸಿರುತ್ತಾಳೆ ಎಂದರೆ ಸರಿ. 2 ನೇ ಪ್ರತಿವಾದಿಯು ದಿಃ04-03-1971 ರಲ್ಲಿ ಜನಿಸಿರುತ್ತಾಳೆ ಎಂದರೆ ಸರಿ. ದಿಃ 02-02-1981 ರಂದು 4 ನೇ ಪ್ರತಿವಾದಿ ಜನಿಸಿರುತ್ತಾಳೆ ಎಂದರೆ ಸರಿ. ದಿಃ 21-03-1977 ರಂದು 3 ನೇ ಪ್ರತಿವಾದಿ ಜನಿಸಿರುತ್ತಾಳೆ ಎಂದರೆ ಸರಿ. ಸ ನಂಃ 42 ವಿಸ್ತೀರ್ಣ 1 ಎಕರೆ 30 ಗುಂಟೆ ಸ ನಂಃ 18 ವಿಸ್ತೀರ್ಣ 1 ಎಕರೆ 12 ಗುಂಟೆ ಜಮೀನುಗಳು ರೈತಾಪಿ ಜಮೀನುಗಳು ಎಂದರೆ ಸರಿ. ಸದರಿ ಜಮೀನುಗಳನ್ನು ಮಂಜೂರಿ ಕೋರಿ ನನ್ನ ತಂದೆ ಭೂ ನ್ಯಾಯ ಮಂಡಳಿ, ಹಾನಗಲ್ಲಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ.

2. ನನ್ನ ತಂದೆ ಸ ನಂಃ 12/1 ರ ಪೈಕಿ 31 ಗುಂಟೆ ಜಮೀನು ಮತ್ತು ಸ ನಂಃ 18 ರ ಪೈಕಿ 1 ಎಕರೆ 12 ಗುಂಟೆ ಜಮೀನಿಗೆ ರೈತಾಪಿ ಹಕ್ಕಿನ ಮಂಜೂರಾತಿ ಕೋರಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನನ್ನ ತಂದೆ ನಿಜ ಸಂಗತಿಗಳನ್ನು ನಮೂದು ಮಾಡಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಜಮೀನುಗಳನ್ನು ಮಂಜೂರಾತಿ ಕೋರಿ ನನ್ನ ತಂದೆ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸುವಾಗ ಪ್ರತಿವಾದಿಗಳ ಮದುವೆಗಳು ಆಗಿರಲಿಲ್ಲ ಎಂದರೆ ಸರಿ. ಸದರಿ ಜಮೀನುಗಳನ್ನು ಮೂಲತಃ ನನ್ನ ಅಜ್ಜ ಬಸವಂತಪ್ಪ ರೈತನಾತೆಯಿಂದ ವಹಿವಾಟು ಮಾಡುತ್ತಿದ್ದನು ಎಂದರೆ ಗೊತ್ತಿಲ್ಲ.

3. ನನ್ನ ತಂದೆಯಾಗಲೀ ಅಥವಾ ದೊಡ್ಡಪ್ಪನಾಗಲೀ ವ್ಯವಸಾಯವನ್ನು ಹೊರತು

ಪಡಿಸಿ ವ್ಯಾಪಾರ ಅಥವಾ ನೌಕರಿ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ಮಂಜೂರು ಮಾಡಿದ್ದ ಸದರಿ ರೈತಾಪಿ ಜಮೀನುಗಳಲ್ಲಿ ಬರುತ್ತಿದ್ದ ಉತ್ಪನ್ನ ಹೊರತು ಪಡಿಸಿ ಇತರ ಉತ್ಪನ್ನ ಇರಲಿಲ್ಲ ಎಂದರೆ ಸರಿ.

4. ಸ ನಂ: 18 ರಲ್ಲಿ 1 ಎಕರೆ 3 ಗುಂಟೆ ಮತ್ತು ಸ ನಂ: 42 ವಿಸ್ತೀರ್ಣ 1 ಎಕರೆ 30 ಗುಂಟೆ ಜಮೀನನ್ನು ನನ್ನ ತಂದೆ ಕೂಲಿ ನಾಲಿ ಮಾಡಿ ಬಂದ ಆದಾಯದಿಂದ ಖರೀದಿ ಮಾಡಿರುತ್ತಾರೆ. ಸದರಿ ಜಮೀನುಗಳನ್ನು ಖರೀದಿ ಮಾಡಲು ನನ್ನ ತಂದೆ ತನ್ನ ಪರವಾಗಿ



ಮಂಜೂರು ಮಾಡಿದ ರೈತಾಪಿ ಜಮೀನುಗಳಲ್ಲಿ ಬಂದಿದ್ದ ಉತ್ಪನ್ನದ ಆದಾಯವನ್ನು ಉಪಯೋಗಿಸಿದ್ದರು. ಸದರಿ ರೈತಾಪಿ ಜಮೀನುಗಳಲ್ಲಿ ಮತ್ತು ಖರೀದಿ ಹಿಡಿದ ಸದರಿ ಜಮೀನುಗಳಲ್ಲಿ ಕೆಲಸ ಮಾಡಲು ನಾನು ಮತ್ತು ಪ್ರತಿವಾದಿಗಳು ಹೋಗುತ್ತಿದ್ದೆವು. ಸದರಿ ಎಲ್ಲಾ ಜಮೀನುಗಳಲ್ಲಿ ಬರುತ್ತಿದ್ದ ಉತ್ಪನ್ನಗಳನ್ನು ನಾನು, ಪ್ರತಿವಾದಿಗಳು ಮತ್ತು ನನ್ನ ತಂದೆ ಉಪಯೋಗ ಮಾಡುತ್ತಿದ್ದೆವು.

5. ಪ್ರತಿವಾದಿಗಳ ವಿವಾಹವನ್ನು ನನ್ನ ತಂದೆಯೇ ಅವರ ಜೀವಿತಾವಧಿಯಲ್ಲಿ ನೆರವೇರಿಸಿದ್ದರು. ಪ್ರತಿವಾದಿಗಳು ತಾವು ವಿವಾಹವಾಗಿ ಹೋಗುವವರೆಗೂ ಸದರಿ ಎಲ್ಲಾ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಅದೇ ರೀತಿ ಕೂಲಿ ಕೆಲಸಕ್ಕೂ ಹೋಗುತ್ತಿದ್ದರು ಎಂದರೆ ಸರಿ. ಪ್ರತಿವಾದಿಗಳಿಗೆ ಅವರವರ ಮದುವೆಯ ಸಂದರ್ಭಗಳಲ್ಲಿ ಚಿನ್ನಾಭರಣಗಳು, ಹಣವನ್ನು ನೀಡಿ ಮತ್ತು ಒಳ್ಳೇಯ ಮನೆತನಕ್ಕೆ ಮದುವೆಯನ್ನು ಮಾಡಲಾಗಿತ್ತು. ಪ್ರತಿವಾದಿಗಳಿಗೆ ಎಷ್ಟು ಚಿನ್ನ ಮತ್ತು ಹಣವನ್ನು ನೀಡಲಾಗಿತ್ತು ಎಂದು ಗೊತ್ತಿಲ್ಲ. ಪ್ರತಿವಾದಿಯರ ಮೇಲೆ ನನ್ನ ತಂದೆ ಜೀವಂತ ಇರುವವರೆಗೆ ವಿಶ್ವಾಸ ಮತ್ತು ಪ್ರೀತಿ ಇತ್ತು. ನನ್ನ ತಂದೆಯು ಜೀವಂತ ಇರುವವರೆಗೂ ಪ್ರತಿವಾದಿಗಳ ಗಂಡನ ಮನೆಗೆ ಮತ್ತು ಪ್ರತಿವಾದಿಗಳು ತಂದೆಯ ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿ.

6. 1ನೇ ಪ್ರತಿವಾದಿಯನ್ನು ಯತ್ತಿನಹಳ್ಳಿ ಗ್ರಾಮದ ವರನಿಗೆ ಮದುವೆ ಮಾಡಿಕೊಡಲಾಗಿದ್ದು, ಪ್ರಸ್ತುತ ಆಕೆಯು ನಮ್ಮ ಮನೆಯಲ್ಲಿಯೇ ವಾಸವಿದ್ದಾಳೆ. 1ನೇ ಪ್ರತಿವಾದಿಯು ಆಕೆಯು ಮದುವೆ ಆದ 2 ವರ್ಷಗಳಲ್ಲಿಯೇ ಗಂಡ ಬಿಟ್ಟಿದ್ದು, ಆ ಕಾರಣದಿಂದ ಆಕೆಯು ನನ್ನೊಂದಿಗೆ ವಾಸವಿದ್ದಾಳೆ. 3ನೇ ಪ್ರತಿವಾದಿಯನ್ನು ನಮ್ಮ ಗ್ರಾಮವಾದ ಸೋಮಾಪುರದ ವರನಿಗೆ ನೀಡಿ ಮದುವೆ ಮಾಡಲಾಗಿದೆ ಎಂದರೆ ಸರಿ.



2ನೇ ಪ್ರತಿವಾದಿಯನ್ನು ಬಸಾಪುರದ ವರನಿಗೆ ನೀಡಿ ಮದುವೆ ಮಾಡಲಾಗಿದ್ದು, ಸದರಿ ಬಸಾಪುರ ಮತ್ತು ಸೋಮಾಪುರ ಗ್ರಾಮಕ್ಕೆ ಕೇವಲ 1 ಕಿ ಮೀ ದೂರ ಇದೆ ಎಂದರೆ ಸರಿ.

7. 1ನೇ ಪ್ರತಿವಾದಿಯ ಗಂಡನ ಮನೆಯಲ್ಲಿ ಯಾವ ಯಾವ ಆಸ್ತಿಗಳು ಇವೆ ಎಂದರೆ ಗೊತ್ತಿಲ್ಲ. ಆಕೆಯು ಯತ್ತಿನಹಳ್ಳಿಯ ತನ್ನ ಗಂಡನ ಮನೆತನದ ಆಸ್ತಿಗಳನ್ನು ಸಾಗುವಳಿ ಮಾಡುವುದಿಲ್ಲ ಎಂದರೆ ಸರಿ. 3ನೇ ಪ್ರತಿವಾದಿಯ ಗಂಡನ ಕುಟುಂಬಕ್ಕೆ 3 ಎಕರೆ ಜಮೀನುಗಳು ಇವೆ. ಅದೇ ರೀತಿ 4ನೇ ಪ್ರತಿವಾದಿಯ ಗಂಡನ ಕುಟುಂಬಕ್ಕೆ 3 ಎಕರೆ ಜಮೀನುಗಳು ಇವೆ. 4ನೇ ಪ್ರತಿವಾದಿಯು ಕಲಕೇರಿಯ ಗಂಡನ ಮನೆಯಲ್ಲಿಯೇ ವಾಸವಿದ್ದಾಳೆ. ಪ್ರತಿವಾದಿಗಳಿಗೆ ನನ್ನ ತಂದೆ ಸಾಕಷ್ಟು ಚಿನ್ನಾಭರಣಗಳು ಮತ್ತು ಹಣವನ್ನು ಮದುವೆಯ ಸಂದರ್ಭದಲ್ಲಿ ನೀಡಲಾಗಿತ್ತು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಗಂಡನ ಕುಟುಂಬದವರು ಬಡವರು ಎಂದರೆ ಸರಿಯಲ್ಲ.

8. ನನ್ನ ತಂದೆ ಸಾಯುವವರೆಗೂ ಆರೋಗ್ಯವಾಗಿಯೇ ಇದ್ದರು. ನನ್ನ ತಂದೆಗೆ ಕಣ್ಣು ಮತ್ತು ಕಿವಿಗಳು ಯಾವಾಗ ಹೋಗಿದ್ದವು ಎಂಬ ಸೂಚನೆಗೆ ಸಾಕ್ಷಿಯು ನನ್ನ ತಂದೆ ಸಂಪೂರ್ಣವಾಗಿ ಸಾಯುವವರೆಗೂ ಆರೋಗ್ಯವಾಗಿಯೇ ಇದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯು ಸಾಯುವ ಕೆಲವು ದಿನಗಳ ಪೂರ್ವದಲ್ಲಿ ಅವರಿಗೆ ಪಾರ್ಶ್ವವಾಯು ತಗುಲಿದ್ದು ಮತ್ತು ಅದೇ ರೀತಿ ಕಣ್ಣುಗಳು ಮತ್ತು ಕಿವಿಗಳು

ಹಾಳಾಗಿದ್ದವು ಎಂದರೆ ಸರಿಯಲ್ಲ. ನನ್ನ ತಂದೆಗೆ ಮಂಜೂರಾದ ರೈತಾಪಿ ಹಕ್ಕಿನ ಜಮಿನುಗಳು ಮತ್ತು ಖರೀದಿ ಮಾಡಿದ ಜಮೀನುಗಳಲ್ಲಿ ಬರುತ್ತಿದ್ದ ಉತ್ಪನ್ನವನ್ನು ಒಟ್ಟಿಗೆ ಶೇಖರಿಸಿ ಇಡುತ್ತಿದ್ದರು ಎಂದರೆ ಸರಿ. ಸದರಿ ಉತ್ಪನ್ನವನ್ನು ಒಟ್ಟಿಗೆ ವ್ಯಾಪಾರ ಮಾಡಿ ಅದರಲ್ಲಿ ಬರುತ್ತಿದ್ದ ಆದಾಯವನ್ನು ಒಟ್ಟುಕುಟುಂಬದ ಒಳಿತಿಗಾಗಿ ಉಪಯೋಗಿಸು ತ್ತಿದ್ದರು ಎಂದರೆ ಸರಿ.



9. ನನ್ನ ತಂದೆ ಮೃತು ಪತ್ರವನ್ನು ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಮೃತ್ಯು ಪತ್ರವನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ತಂದೆ ಸಹಿಯನ್ನು ಮಾಡುವುದನ್ನು ಮಾತ್ರ ಕಲಿತ್ತಿದ್ದರು ಎಂದರೆ ಸರಿ. ಮೃತ್ಯು ಪತ್ರವನ್ನು ಯಾರು ಬರೆದಿದ್ದರ ಎಂದು ಗೊತ್ತಿಲ್ಲ. ಮೃತ್ಯು ಪತ್ರವನ್ನು ಎಷ್ಟು ಹಾಳೆಗಳಲ್ಲಿ ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಮೃತ್ಯು ಪತ್ರಕ್ಕೆ ಯಾರು ಮತ್ತು ಎಲ್ಲಿ ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಮೃತ್ಯು ಪತ್ರವು ನೋಂದಾದ ಬಳಿಕ ಅದು ನನ್ನ ಬಳಿಯೇ ಇತ್ತು. ನಿ.ಪಿ-6 ರ ಮೃತ್ಯು ಪತ್ರವನ್ನು ನನ್ನ ತಂದೆ ನನ್ನ ಪರವಾಗಿ ಬರೆದು ಕೊಟ್ಟಿರುವುದಿಲ್ಲ ಮತ್ತು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಅದನ್ನು ನಾನು ಖೊಟ್ಟಿಯಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

10. ಮೃತ್ಯು ಪತ್ರದ ಆಧಾರದ ಮೇಲೆ ಆದ ಖಾತೆ ಬದಲಾವಣೆಗಳನ್ನು ಪ್ರಶ್ನಿಸಿ ಪ್ರತಿವಾದಿಗಳು ಸಹಾಯಕ ಎ.ಸಿ., ಸವಣೂರು ರವರ ಬಳಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಎಂ.ಜಿ.ಪಾಣಿಗಟ್ಟಿ ಎಂಬ ವಕೀಲರ ಮೂಲಕ ಹಾಜರಾಗಿದ್ದೆ ಎಂದರೆ ಸರಿ. ಮೃತ್ಯು ಪತ್ರದ ಆಧಾರದ ಮೇಲೆ ಆಗಿದ್ದ ಖಾತೆ ಬದಲಾವಣೆಯು ಕಾನೂನುಬಾಹಿರ ಎಂದು ತೀರ್ಮಾನಿಸಿ ಹಾನಗಲ್ಲ, ತಹಶೀಲ್ದಾರವರು ಮಾಡಿದ ಎಂ.ಆರ್ ಆದೇಶವನ್ನು ಎ.ಸಿ. ಸವಣೂರು ರವರು ವಜಾ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ವಜಾ ಆದೇಶ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಪ್ರತಿವಾದಿಯರಿಗೂ ಸಮನಾದ ಹಿಸ್ಸೇಯ ಹಕ್ಕು ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಾಮೂಹಿಕವಾಗಿ ದಾವಾ ಆಸ್ತಿಗಳನ್ನು ನನ್ನೊಂದಿಗೆ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರ ಕಾನೂನುಬದ್ದ ಹಕ್ಕನ್ನು ಕಬಳಿಸುವ ಉದ್ದೇಶದಿಂದ ನಿ.ಪಿ-6 ರ ಖೊಟ್ಟಿ ಮೃತ್ಯು ಪತ್ರವನ್ನು



ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ನಮೂದಿಸಿರುವ ಸಂಗತಿಗಳು ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ